	Bangalore	Member
4.	Chief Secretary	Member
5.	Development Commissioner	Member
6.	Secretary to Govt., Finance Department	Member
7.	Additional Chief Secretary to Government.	Member-Secretary

ವಿಷಯ :– ವೈದ್ಯಾಧಿಕಾರಿಗಳ ವರ್ಗಾವಣೆ

ಪ್ರ. 64 (30) ಶ್ರೀ ಎಸ್. ಎಸ್. ಪಾಟೀಲ್, ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).–– ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :––

ಅ) ದಿನಾಂಕ : 10–1–83ರಿಂದ 20–7–83ರವರೆಗೆ ವರ್ಗವಾದ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು ;

ಆ) ವರ್ಗವಾದ ವೈದ್ಯಕೀಯ ಅಧಿಕಾರಿಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ವರ್ಗವಾದ ಅಧಿಕಾರಿಗಳ ಸಂಖ್ಯೆ ಎಷ್ಟು ;
ಕೋರಿಕೆ ಮೇಲೆ ವರ್ಗವಾದವುಗಳೆಷ್ಟು ;

ಇ) ಇವುಗಳಲ್ಲಿ ಆಕಾಲಿಕ ವರ್ಗವಾದವುಗಳೆಷ್ಟು ;

ಈ) ವರ್ಗಾವಣೆಗಳಿಂದ ತಗುಲಿದ ಅಂದಾಜು ವೆಚ್ಚ ಎಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.––(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).––

ಅ) 390

ಆ) 132
ಮತ್ತು
258
ಅನುಕ್ರಮವಾಗಿ

ಇ) 258

ಈ) ರೂ 1,12000–00 ಅಂದಾಜು ಖರ್ಚು

ವಿಷಯ :– ಪೊಲೀಸ್ ಅಧಿಕಾರಿಗಳ ವರ್ಗಾವಣೆ

ಪ್ರ. 65 (32) ಶ್ರೀ ಎಸ್.ಎಸ್. ಪಾಟೀಲ್ (ಬಿಳಗಿ) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ).–ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :––

ಅ) ದಿನಾಂಕ : 10–1–83ರಿಂದ 20–7–83ರ ವರೆವಿಗೆ ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ಅಧಿಕಾರಿಗಳು ಸೇರಿದಂತೆ ವರ್ಗಮಾಡಲಾದ ಪೋಲೀಸ್ ಅಧಿಕಾರಿಗಳು ಎಷ್ಟು ; (ವರ್ಗಾವಣೆಗಳಲ್ಲಿ ಆರಕ್ಷಕ ಉಪಾಧೀಕ್ಷಕರು, ಆರಕ್ಷಕ ನಿರೀಕ್ಷಕರು, ಆರಕ್ಷಕ ಉಪನಿರೀಕ್ಷಕರು, ಆರಕ್ಷಕ ಮುಖ್ಯ ಪೇದೆಗಳು ಮತ್ತು ಆರಕ್ಷಕ ಪೇದೆಗಳ ವಿವರಗಳನ್ನು ಕೊಡಬೇಕು) ;

ಆ) ಇವುಗಳಲ್ಲಿ ಆಕಾಲಿಕ ವರ್ಗಾವಣೆಗಳಿಗೆ ಸೇರಿರುವುದೆಷ್ಟು ;

ಇ) ಇದರ ಬಗ್ಗೆ ಆದ ವೆಚ್ಚವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ.––(ಮುಖ್ಯಮಂತ್ರಿಯವರು) :––

ಅ) ಈ ಕೆಳಗೆ ಸೂಚಿಸಿರುವಷ್ಟು ಆರಕ್ಷಕ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

1.	ಆರಕ್ಷಕ ಉಪಾಧೀಕ್ಷಕರು	— 85
2.	ಆರಕ್ಷಕ ನಿರೀಕ್ಷಕರು	— 202
3.	ಆರಕ್ಷಕ ಉಪ ನಿರೀಕ್ಷಕರು	— 616
4.	ಆರಕ್ಷಕ ಮುಖ್ಯ ಪೇದೆಗಳು	— 423
5.	ಆರಕ್ಷಕ ಪೇದೆಗಳು	— 2604

ಆ)

1.	ಆರಕ್ಷಕ ಉಪಾಧೀಕ್ಷಕರು	75
2.	ಆರಕ್ಷಕ ನಿರೀಕ್ಷಕರು	152
3.	ಆರಕ್ಷಕ ಉಪ ನಿರೀಕ್ಷಕರು	436
4.	ಆರಕ್ಷಕ ಮುಖ್ಯ ಪೇದೆಗಳು	70
5.	ಆರಕ್ಷಕ ಪೇದೆಗಳು	113

ಇ) ಇಲ್ಲಿಯವರೆವಿಗೂ 3,37, 531 ರೂಪಾಯಿಗಳು ಮತ್ತು 55 ಪೈಸೆಯಷ್ಟು ವೆಚ್ಚ ವಾಗಿರುತ್ತದೆ.

ವಿಷಯ :– ಸರ್ಕಾರಿ ನೌಕರರ ವರ್ಗಾವಣೆಯ ಕುರಿತು

ಪ್ರ. 66 (16) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).––ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :––

ಅ) ಈ ಸರಕಾರ ಅಧಿಕಾರಕ್ಕೆ ಬಂದ ಮೇಲೆ ವಿವಿಧ ಇಲಾಖೆಗಳಲ್ಲಿ ಆಜ್ಞೆ ಮಾಡಲಾದ ವರ್ಗಾ ವರ್ಗಿ ಸಂಖ್ಯೆ ಎಷ್ಟು ;

ಆ) ಸರ್ಕಾರಿ ನೌಕರರ ಈ ವರ್ಗಾವರ್ಗಿಯ ಬಗ್ಗೆ ಸರಕಾರದವರ ನೀತಿಯೇನು ;

ಇ) ಸರಕಾರದವರು ಆಜ್ಞೆ ಮಾಡಿದ ವರ್ಗಗಳ ಕಾರಣದಿಂದ ಖಜಾನೆಗೆ ಆದ ಖರ್ಚು ಎಷ್ಟು ; ಇಲಾಖಾವಾರು ವಿವರ ನೀಡುವುದು ?

ಶ್ರೀ ರಾಮಕೃಷ್ಣ ಹೆಗಡೆ.––ಮುಖ್ಯಮಂತ್ರಿಗಳು :––

ಅ) ಈ ಪ್ರಶ್ನೆಗೆ ಸಂಬಂಧಪಟ್ಟ ಮಾಹಿತಿಯನ್ನು ಸರಕಾರದ ಎಲ್ಲಾ ಇಲಾಖೆಗಳಿಂದ ಸಂಗ್ರಹಿಸ ಬೇಕಾಗಿರುವುದರಿಂದ ಆ ಮಾಹಿತಿಯನ್ನು ಸಂಗ್ರಹಿಸಿ ಮಾನ್ಯ ಸದಸ್ಯರಿಗೆ ಮುಂದೆ ಒದಗಿಸ ಲಾಗುವುದು.

ಆ) ಸರ್ಕಾರಿ ನೌಕರರ ವರ್ಗಾವರ್ಗಿಯ ಬಗ್ಗೆ ಸರ್ಕಾರದ ನೀತಿಯಂತೆ ಮುಖ್ಯವಾಗಿ ವರ್ಗಾವಣೆ ಯಾಗಲಿರುವ ಸರ್ಕಾರಿ ನೌಕರರನ್ನು ಅವರವರ ಕಾರ್ಯಸ್ವರೂಪದ ಆಧಾರದ ಮೇಲೆ ಎ, ಬಿ, ಮತ್ತು ಸಿ ಎಂಬ ಮೂರು ವರ್ಗಗಳಾಗಿ ವಿಂಗಡಿಸಿ ಪ್ರತಿ ವರ್ಗದವರಿಗೆ ಒಂದು ಸ್ಥಳದಲ್ಲಿ ಇರಬಹುದಾದ ಕನಿಷ್ಠ ಮತ್ತು ಗರಿಷ್ಠ ಅವಧಿಯನ್ನು ನಿಗದಿ ಪಡಿಸಲಾಗಿದೆ ಮತ್ತು ತಾರೀಖು 11–3–1983ರಿಂದ ಅವಧಿ ಪೂರ್ವ ವರ್ಗಾವಣೆಯನ್ನು ಮಾಡುವ ಅಧಿಕಾರವನ್ನು ಸಂಬಂಧಪಟ್ಟ ಇಲಾಖಾ ಮಂತ್ರಿಯವರಿಗೆ ಮಹಿಸಿಕೊಡಲಾಗಿದೆ.

ಇ) ಈ ವಿವರಗಳನ್ನೂ ಸಹ ಎಲ್ಲಾ ಇಲಾಖೆಗಳಿಂದ ಸಂಗ್ರಹಿಸಿ ಮಾನ್ಯ ಸದಸ್ಯರಿಗೆ ಮುಂದೆ ಒದಗಿಸಿಕೊಡಲಾಗುವುದು.

ವಿಷಯ :– ತುಮಕೂರು ಜಿಲ್ಲೆಯಲ್ಲಿ ನಿಯಂತ್ರಿತ ಅವಶ್ಯಕ ವಸ್ತುಗಳನ್ನು ವಿತರಣೆ ಮಾಡುವ ಬಗ್ಗೆ

ಪ್ರ. 67 (3) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).––ಮಾನ್ಯ ಆಹಾರ ಮತ್ತು ನಾಗರೀಕ ಸರಬ ರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :––

ಅ) ತುಮಕೂರು ಜಿಲ್ಲೆಯಲ್ಲಿ ನಿಯಂತ್ರಿಕ ಅವಶ್ಯಕ ವಸ್ತುಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲು ಯಾವ ಕ್ರಮ ಕೈಗೊಂಡಿದೆ. ಯಾವ ಏಜೆಂಟರ ಮುಖಾಂತರ ವಿತರಣೆ ಮಾಡ ಲಾಗುತ್ತದೆ. ಹಾಗೂ ಹಂಚಿಕೆ ಮಾಡುತ್ತಿರುವ ಪ್ರಮಾಣ ಮತ್ತು ಏಜೆಂಟರುಗಳ ವಿವರ ತಾಲ್ಲೂಕು ಊರುಗಳನ್ನು ತಿಳಿಸಿ.

ಆ) ಪ್ರತಿಶತ 70 ರಷ್ಟು ಅವಶ್ಯಕ ವಸ್ತುಗಳನ್ನು ಸಹಕಾರಿ ಸಂಘಗಳ ಮೂಲಕ ವಿತರಣೆ ಮಾಡ ಲಾಗುತ್ತಿದೆಯೇ ;

ಇ) ಜಿಲ್ಲಾ ಮಟ್ಟದಲ್ಲಿ ವಿತರಣೆ ಮಾಡುವ ಅಭಿಕರಣ ಯಾವುವು ?

ಶ್ರೀ ಜಿ. ಬಸವಣ್ಣಪ್ಪ.––(ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು) :––

ಅ) ತುಮಕೂರು ಜಿಲ್ಲೆಗೆ ನಿಗದಿ ಮಾಡಿರುವ ಅವಶ್ಯಕ ವಸ್ತುಗಳನ್ನು ಜಿಲ್ಲಾಧಿಕಾರಿಗಳು ಸಗಟು ವ್ಯಾಪಾರಿಗಳಿಗೆ ಪುನರ್ ವಿತರಣೆ ಮಾಡುವರು. ಹೀಗೆ ವಿತರಿಸಲ್ಪಟ್ಟ ಪದಾರ್ಥ ಗಳನ್ನು ಆಯಾಯ ತಾಲ್ಲೂಕು ತಹಸೀಲ್ದಾರರು ಅನೌಪಚಾರಿಕ ಪಡಿತರ ಅಧಿಕಾರಿ, ತುಮ ಕೂರು ಅವರು ಅವರವರ ಪ್ರದೇಶಗಳಲ್ಲಿ ಸಹಕಾರ ಸಂಘಗಳು ಮತ್ತು ನ್ಯಾಯಬೆಲೆ ಅಂಗಡಿ ಗಳಿಗೆ ಪುನರ್ ವಿತರಣೆ ಮಾಡುತ್ತಾರೆ.

ತಾಲ್ಲೂಕುವಾರು ನಿಗಧಿತ ಪ್ರಮಾಣ ಮತ್ತು ಎತ್ತುವಳಿಯ ವಿವರವನ್ನು ಅನುಬಂಧ 2ರಲ್ಲಿ ಮತ್ತು ಏಜೆಂಟರ ವಿವರವನ್ನು ಅನುಬಂಧ–1ರಲ್ಲಿ ನಮೂದಿಸಲಾಗಿದೆ.

ಅವಶ್ಯಕ ವಸ್ತುಗಳ ವಿತರಣಾ ಪ್ರಮಾಣವನ್ನು ಈ ಮುಂದೆ ತೋರಿಸಲಾಗಿದೆ.

ಅಕ್ಕಿ :–– ನಿಗದಿತ ಪ್ರಮಾಣಕ್ಕನುಗುಣವಾಗಿ ಪ್ರತಿ ಕಾರ್ಡಿಗೆ ಪ್ರತಿ ತಿಂಗಳಿಗೆ ಕನಿಷ್ಟ 5 ಕೆ.ಜಿ. ಮತ್ತು ಗರಿಷ್ಟ 15 ಕೆ.ಜಿ.

ಗೋಧಿ :–– ಪ್ರತಿ ಕಾರ್ಡಿಗೆ ಪ್ರತಿ ತಿಂಗಳಿಗೆ 3 ಕೆ.ಜಿ.ಯಿಂದ 10 ಕೆ.ಜಿ. ವರೆಗೆ.

ಮೈದಾ ಮತ್ತು ರವೆ :–– ಪ್ರತಿ ಕಾರ್ಡಿಗೆ ಪ್ರತಿ ತಿಂಗಳಿಗೆ 4 ಕೆ.ಜಿ.

ಸಕ್ಕರೆ :–– ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ತಲಾ 1 ಕೆ.ಜಿ. ಮತ್ತು ಗರಿಷ್ಟ 6 ಕೆ.ಜಿ. ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಕಾರ್ಡಿಗೆ 3 ಕೆ.ಜಿ.ಯಂತೆ.

ಆ) – ಹೌದು –

ಇ) ಅನುಬಂಧ 1ರಲ್ಲಿ ತೋರಿಸಲಾಗಿದೆ.